# ಗುಲಾಮಗಿರಿ ಮತ್ತು ಅಸ್ಪೃಶ್ಯತೆ

ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಸೆಕ್) ಇತ್ತೀಚೆಗಷ್ಟೆ ಅಧ್ಯಯನ ನಡೆಸಿ ಒಂದು ವರದಿ ನೀಡಿದೆ. ಗಾಬರಿ ಮೂಡಿಸುವ ವಿಚಾರವೇನೆಂದರೆ ಅಸ್ಪೃಶ್ಯತೆ ಹಳ್ಳಿಗಳಲ್ಲಿ ಸಾಂಪ್ರದಾಯಿಕವಾಗಿ ಬೇರು ಬಿಟ್ಟಿರುವ, ಸಾಮಾನ್ಯ ಪರಿಶಿಷ್ಟ ಜನರು ದೈನಂದಿನ ಬದುಕಿನಲ್ಲಿ ಅನುಭವಿಸುವ ಹಳೆಯ ರೂಢಿಗತ ಪದ್ಧತಿ ಅಂದರೆ ಸಾರ್ವಜನಿಕ ಬಾವಿಗಳಲ್ಲಿ ನೀರು ಸೇದಲಾಗದಿರುವುದು, ಕ್ಷೌರಿಕರಿಂದ ಕ್ಷೌರ ನಿರಾಕರಣೆ, ಹೋಟೆಲ್‌ಗಳಲ್ಲಿ ಹೊರಗಡೆ ಕುಳಿತು ಬೇರೆ ಲೋಟ ತಟ್ಟೆ ಬಳಸುವುದು, ದೇವಸ್ಥಾನ ಪ್ರವೇಶ ನಿಷಿದ್ಧ ಇದಕ್ಕಷ್ಟೆ ಸೀಮಿತವಾಗಿಲ್ಲ. ಊರ ಹೊರಗಿದ್ದ ಕೇರಿಗಳು ಈಗ ಕುಟುಂಬಗಳ ವಿಭಜನೆ ಮತ್ತು ವಿಸ್ತರಣೆಯಿಂದ ಸ್ವಲ್ಪ ಹೊಂದಿಕೊಂಡಂತೆ ಕಾಣುತ್ತವೆಯಾದರೂ ಬೇರೆಯಾಗಿಯೆ ಇವೆ. ಕೊಡುಕೊಳ್ಳುವ ಮಾತಿರಲಿ, ಕುಟುಂಬಗಳ ಸಹಜ ಹೊಕ್ಕುಬಳಕೆ ಜಾತಿಜಾತಿಗಳೊಳಗಷ್ಟೆ ನಡೆಯುತ್ತದೆ. ಅಂತರ್ಜಾತೀಯ ಮದುವೆ ಮತ್ತು ಭೋಜನ ಕೂಟಗಳು ಆಧುನಿಕತೆ ಬೆಳೆದಂತೆಲ್ಲಾ ಹೆಚ್ಚು ಪ್ರತಿರೋಧಕ್ಕೊಳಪಡುತ್ತಿವೆ! ಅಷ್ಟರಮಟ್ಟಿಗೆ ನಮ್ಮ ಸನಾತನ ಸಂಪ್ರದಾಯಬದ್ಧ ನಾಗರಿಕತೆಯನ್ನು ರಕ್ಷಿಸಿಕೊಳ್ಳಲಾಗುತ್ತಿದೆ. ಆದರೆ ಭಯ ಹುಟ್ಟಿಸುವ ವಿಚಾರವೇನೆಂದರೆ ಅಸ್ಪೃಶ್ಯತೆಯೆಂಬ ಬ್ರಹ್ಮರಾಕ್ಷಸ ತನ್ನ ಕರಾಳ ಕಬಂಧ ಬಾಹುವನ್ನು ಇನ್ನಷ್ಟು ಹೊಸ ಕ್ಷೇತ್ರಗಳಿಗೆ ಚಾಚಿ ತಬ್ಬುತ್ತಿರುವುದು, ಸಮಾಜವನ್ನು ಮತ್ತಷ್ಟು ಕುರೂಪಗೊಳಿಸುತ್ತಿರುವುದು.

ಗ್ರಾಮ ಪಂಚಾಯಿತಿ ಸಭೆಗಳು ನಡೆಯುವಾಗ ದಲಿತ ಸದಸ್ಯೆಯರನ್ನು ಉದ್ದೇಶಪೂರ್ವಕವಾಗಿ ಹೊರಗೆ ಕೂರಿಸಲಾಗುತ್ತದೆ ಎಂದರೆ ಏನರ್ಥ? ಜಾತಿಪದ್ಧತಿ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿದೆ. ಪ್ರಜಾಪ್ರಭುತ್ವದ ಬುನಾದಿಯಾದ ಚುನಾವಣೆಗಳನ್ನು ಅಣಕಿಸುತ್ತಿದೆ. ಅದರಿಂದ ಅತಿಶೂದ್ರಾಸ್ಪೃಶ್ಯ ಜಾತಿಗಳ ಪ್ರಗತಿ ಕುಂಠಿತವಾಗಿದೆ ಎಂಬುದು ಈಗಾಗಲೇ ವೇದ್ಯವಾಗಿದೆ. ಜಾತಿಪದ್ಧತಿ ಇರುವಲ್ಲಿ ಅಸ್ಪೃಶ್ಯತೆ ಅದರ ನೆರಳಾಗಿರುತ್ತದೆ ಎಂಬುದು ಈ ವರದಿಯಿಂದ ಸಾಬೀತಾಗುತ್ತದೆ. ಅಸ್ಪೃಶ್ಯತೆ ಜಾತಿಪದ್ಧತಿಯ ಉಪ ಉತ್ಪನ್ನ ಎಂಬ ಅಂಬೇಡ್ಕರರ ಮಾತು ಸತ್ಯವಾಗಿದೆ. ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಗೆ ಜಾಗವಿಲ್ಲ ಎಂಬ ಗಾಂಧೀಜಿಯವರ ಹೇಳಿಕೆ ಕೇವಲ ಚಡಪಡಿಕೆಯಾಗಿಯೆ ಉಳಿಯುತ್ತದೆ.

ಜಗತ್ತಿನಲ್ಲಿಯೆ ಅತ್ಯಂತ ಹೇಯವಾದ ಈ ಅಸ್ಪೃಶ್ಯತಾಚರಣೆಯನ್ನು ತೊಲಗಿಸುವುದು ಹೇಗೆ? ಗುಲಾಮಗಿರಿಯನ್ನು ತೊಲಗಿಸಲಾಯಿತು ಆದರೆ ಜಾತಿಪದ್ಧತಿಯನ್ನು ತೊಲಗಿಸುವುದು ಅಷ್ಟು ಸುಲಭವಲ್ಲ ಎಂಬುದು ಮತ್ತೆ ಮತ್ತೆ ರುಜುವಾತಾಗುತ್ತಿದೆ. ಜಗತ್ತಿನಲ್ಲಿಯೆ ಅತ್ಯಂತ ಹೇಯವಾದದ್ದು ಎಂದು ಯಾಕೆ ಹೇಳಿದೆನೆಂದರೆ ಈ ಘನಘೋರ ತಾರತಮ್ಯ ನೀತಿಯನ್ನು ಗುಲಾಮೀ ಪದ್ಧತಿಗೆ ಹೋಲಿಸುವವರಿದ್ದಾರೆ. ಸ್ವತಃ ಲಾಲಾಲಜಪತ ರಾಯ್ ತಮ್ಮ ಪುಸ್ತಕವೊಂದರಲ್ಲಿ ಅಸ್ಪೃಶ್ಯತೆ ಗುಲಾಮಗಿರಿಯಷ್ಟು ಕೆಟ್ಟದಲ್ಲ ಎಂದು ಹೇಳಿದ್ದಾರೆ. ತಾರತಮ್ಯ ಎನ್ನುವುದು ಯಾವುದೇ ಸಮಾಜದಲ್ಲಿ ಸಹಜ, ಅದು ಎಲ್ಲ ಕಡೆಯೂ ಪ್ರಚಲಿತವಿದೆ ಎಂಬ ಸಂದೇಶ ನೀಡುವುದು ಇಂತಹ ಹೇಳಿಕೆಯ ಹಿಂದಿರುವ ಉದ್ದೇಶ. ಅದಕ್ಕೆ ಉತ್ತರವಾಗಿ ಗುಲಾಮರು ಮತ್ತು ಅಸ್ಪೃಶ್ಯರು ಎಂಬ ಲೇಖನದಲ್ಲಿ **(Slaves and Untouchables)** ಬಾಬಾಸಾಹೇಬ್ ಅಂಬೇಡ್ಕರ್ ಪ್ರಾಚೀನ ರೋಮನ್ ಗುಲಾಮಗಿರಿ ಮತ್ತು ಆಧುನಿಕ ಅಮೆರಿಕದ ನಿಗ್ರೋ ಪದ್ಧತಿಯನ್ನು ಕುರಿತು ವಿಸ್ತೃತವಾಗಿ ಚರ್ಚಿಸುತ್ತಾರೆ. ಅಸ್ಪೃಶ್ಯತೆ ನಿರ್ಬಂಧಿತ ಸಾಮಾಜಿಕ ನೀತಿಯಾದರೆ **(unfree social order)** ಗುಲಾಮಗಿರಿ ಮುಕ್ತ ಸಾಮಾಜಿಕ ನೀತಿ **(free social order)** ಎಂದು ವಿಶ್ಲೇಷಿಸುತ್ತಾರೆ. ಗುಲಾಮನಾದವನು ಕೊಳ್ಳುವ ಅಥವಾ ಮಾರುವ ವಸ್ತುವಾಗಿದ್ದವನು. ಒಡೆಯನಿಂದ ಅವನು ಬಿಡುಗಡೆ ಪಡೆಯಬಲ್ಲ. ಆದರೆ ಅಸ್ಪೃಶ್ಯ ಹುಟ್ಟುತ್ತಲೇ ಹಂಗಿಗೊಳಗಾದವನು, ಸಾಯುವವರೆಗೂ ನೈಚ್ಯಾನುಸಂಧಾನಕ್ಕೆ ಒಳಪಟ್ಟವನು. ಅಸ್ಪೃಶ್ಯತೆ ಹುಟ್ಟಿನಲ್ಲಿ ಚರ್ಮದೊಂದಿಗೆ ಅಂಟಿಕೊಳ್ಳುವ ಕಳಂಕ **(stigma)**. ಗುಲಾಮ ಒಡೆಯನ ಮನೆಯನ್ನು ಸಂಭಾಳಿಸುತ್ತಾನೆ, ಅಡುಗೆ ಮಾಡಿ ಬಡಿಸುತ್ತಾನೆ. ಆದರೆ ಅಸ್ಪೃಶ್ಯನಿಗೆ ಆ ಅನುಕೂಲ ಅವಕಾಶವಿಲ್ಲ. ಅವನೇನಿದ್ದರೂ ಅಂಗಳದ ಹೊರಗೆ. ಮಲಿನ ಕೆಲಸಗಳನ್ನು ಮಾತ್ರ ಮಾಡುತ್ತಾನೆ. ಇದಕೆ ಕಾರಣ ವೈದಿಕ ಧರ್ಮದಲ್ಲಿ ಮಡಿ, ಮೈಲಿಗೆಯ ಪರಿಕಲ್ಪನೆಯನ್ನು 'ಸ್ಪರ್ಶ'ದೊಂದಿಗೆ ತಳುಕು ಹಾಕಿರುವುದೇ ಆಗಿದೆ.

ರೋಮನ್ ಗುಲಾಮರಿಗೆ ಸಂಗೀತ, ನೃತ್ಯ ಮತ್ತು ಇತರ ಕಲೆಗಳನ್ನು ಕಲಿಸಿ ಕೊಡಲಾಗುತ್ತಿತ್ತು. ಒಡೆಯರಿಗೆ ಮನರಂಜನೆ ಒದಗಿಸುವುದು, ಅವರ ಬೇಸರ ಕಳೆಯುವುದು ಗುಲಾಮರ ಕರ್ತವ್ಯವಾಗಿತ್ತು. ಅವರಿಗೆ ವಿದ್ಯೆ, ಸಂಸ್ಕೃತಿ ಹಾಗೂ ಸಂಪತ್ತುಗಳನ್ನು ಪಡೆಯುವ ಹಕ್ಕಿತ್ತು. ಗುಲಾಮನನ್ನು ನೋಡಿಕೊಳ್ಳುವ ಜವಾಬ್ದಾರಿ ಒಡೆಯನದು. ಅಗತ್ಯವೆನಿಸುವಷ್ಟು ಊಟ, ಬಟ್ಟೆ, ವಸತಿ ಎಲ್ಲವನ್ನೂ ಆತ ಒದಗಿಸುತ್ತಿದ್ದ. ಇವೆಲ್ಲ ಉಪಚರ್ಯೆಗಳು ಅಸ್ಪೃಶ್ಯನಿಗೆ ಅಪರಿಚಿತ. ಶಾಸ್ತ್ರಗಳು ಅವನಿಗೆ ವಿಧಿಸಿರುವ ಊಟ, ಬಟ್ಟೆ ವಸತಿ ಯೋಗ್ಯತೆಯನ್ನು ಇಲ್ಲಿ ಮತ್ತೆ ವಿವರಿಸುವ ಅಗತ್ಯವಿಲ್ಲ. ಜೊತೆಗೆ ಅವನು ಅವಮಾನವೆಂಬ ಮಾಯದ ಗಾಯವನ್ನು ಒಡಲೊಳಗಿಟ್ಟುಕೊಂಡೇ ಬೆಳೆಯುತ್ತಾನೆ. ಅಸ್ಪೃಶ್ಯತೆ ಹಿಂದೂ ಸಮಾಜದಲ್ಲಿ ಶಾಶ್ವತವಾಗಿ ಉಳಿದುಕೊಂಡು ಬಂದಿರುವುದು ಈ ಮೈಲಿಗೆಯ ಪರಿಕಲ್ಪನೆಯಿಂದಲೇ. ಮಡಿಮೈಲಿಗೆ ಎನ್ನುವುದು ಹೆಚ್ಚು ಧಾರ್ಮಿಕ ಪರಿಕಲ್ಪನೆಯೇ ಆದ್ದರಿಂದ ಜಾತಿವಂತರು ಅದರಿಂದ ಬಿಡಿಸಿಕೊಳ್ಳುವ ಸಾಧ್ಯತೆ ಕಡಿಮೆಯೆ. ಇದೇ ಕಾರಣಕ್ಕೆ ಜಾತ್ಯತೀತ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸಬೇಕಾದ ಸರ್ಕಾರಿ ಕಚೇರಿಯ ಒಳಗೂ ಅಸ್ಪೃಶ್ಯತೆ ಪ್ರವೇಶ ಪಡೆಯುತ್ತಿರುವುದು ದುರ್ದೈವದ ಸಂಗತಿ.

ಇತ್ತೀಚೆಗೆ ಬಲಪಂಥೀಯ ವಿದ್ವಾಂಸರೊಬ್ಬರು ಹಿಂದೂ ಮಹಾ ಕಥನ **(Grand Hindu narrative)** ಕುರಿತು ಮಾತಾಡಿದರು. ಸರ್ಕಾರ ಅದಕ್ಕೆ ಕೋಟ್ಯಂತರ ರೂಪಾಯಿ ಖರ್ಚು ಮಾಡಲಿದೆಯಂತೆ. ಭಾರತ ಹಿಂದೂ ನಾಗರಿಕ ಪರಂಪರೆಯನ್ನು ಮರಳಿ ಪಡೆಯಬೇಕಾಗಿದೆ ಎಂದು ಹೇಳಿದರು. ಆದರೆ ಧರ್ಮದ ಕಳಂಕವಾಗಿರುವ ಅಸ್ಪೃಶ್ಯತೆಯನ್ನು ಕುರಿತು, ಮುಕ್ತ ಸಹಬಾಳ್ವೆಯನ್ನು ಒಪ್ಪದ, ವೃತ್ತಿ ವಿಭಜನೆಯ ಹೆಸರಿನಲ್ಲಿ ಸಮಾಜವನ್ನು ಒಡೆದು ಹೋಳಾಗಿಸಿರುವ ಜಾತಿಪದ್ಧತಿಯನ್ನು ಕುರಿತು ಅವರು ಚಕಾರವೆತ್ತಲಿಲ್ಲ. ಇವೆರಡನ್ನೂ ಚರ್ಚಿಸದ ಹಿಂದೂ ಮಹಾಕಥನ ಯಾರನ್ನೆಲ್ಲ ಒಳಗೊಂಡು ಯಾವ ಸ್ವರೂಪದಲ್ಲಿ ಇರಬಹುದು ಎಂಬ ಕುತೂಹಲ ನನಗಂತೂ ಇದೆ. ಅಸ್ಪೃಶ್ಯತೆಯ ಸಮಸ್ಯೆ ಅಸ್ಪೃಶ್ಯರದಲ್ಲ. ಅದು ಧರ್ಮದ ಸಮಸ್ಯೆ. ಆ ಧರ್ಮಭೀರುಗಳು ಬಿಡಿಸಬೇಕಾದ ಸಮಸ್ಯೆ. ಬಸವಾದಿಶರಣರು, ಫುಲೆ, ಅಂಬೇಡ್ಕರಾದಿ ಸುಧಾರಕರು ಬಂದು ಹೋದರೂ ಅಸ್ಪೃಶ್ಯಾದಿ ಕೆಳಜಾತಿ ಸಹೋದರರು 'ಅಲ್ಲೇ ಕುಳಿತಿರುವುದು' ಕೇವಲ ಮುಗ್ಧತೆಯಿಂದ ಎಂಬುದನ್ನು ತಿಳಿಯಲು ಸಮಾಜ ವಿಜ್ಞಾನಿಯ ವ್ಯಾಖ್ಯಾನ ಬೇಕಾಗಿಲ್ಲ. ಜಾಗತಿಕ ಮಟ್ಟದಲ್ಲಿ ಪ್ರಕಾಶಿಸುವ ಅಭಿಲಾಷೆಯುಳ್ಳ ಭಾರತಾಂಬೆಯ ಲಲಾಟದಲ್ಲಿ ಅಸ್ಪೃಶ್ಯತೆಯೆಂಬ ಕುಂಕುಮ ಬೊಟ್ಟು ಸರ್ವಥಾ ಭೂಷಣವಲ್ಲ.

■ **ಮೂಚಿ**

## ಮಾತೇ ಮುತ್ತು

★ ನಿಮ್ಮಿಂದ ಈ ಕೆಲಸ ಆಗುತ್ತದೆ ಎಂದು ನಂಬಿ. ಅರ್ಧ ಕೆಲಸ ಆದಂತೆಯೇ.

—ಥಿಯೊಡಾರ್ ರೂಸ್‌ವೆಲ್ಟ್

★ ಚಂದ್ರನಿಗೇ ಗುರಿ ಇಡಿ. ಗುರಿ ತಪ್ಪಿದರೆ ನಕ್ಷತ್ರಗಳಿಗಾದರೂ ತಲುಪುತ್ತೀರಿ.

—ಲೆಸ್ ಬ್ರೌನ್

★ ಒಬ್ಬ ನಿಷ್ಠಾವಂತ ಸ್ನೇಹಿತ ಹತ್ತು ಸಾವಿರ ಸಂಬಂಧಿಕರಿಗೆ ಸಮ.

—ಯೂರಿಪಿಡೀಸ್

★ ದೊಡ್ಡ ಬದಲಾವಣೆಗಳು ತಕ್ಷಣಕ್ಕೆ ಆಗುವುದಿಲ್ಲ. ಆದರೆ ಸತತ ಪ್ರಯತ್ನದಿಂದ ಕಷ್ಟ ಎನ್ನಿಸಿದ್ದೂ ಸುಲಭವಾಗುತ್ತದೆ.

—ಬಿಲ್ ಬ್ಲ್ಯಾಕ್‌ಮನ್

★ ಶಾಂತಿಯ ಬಗ್ಗೆ ಮಾತನಾಡಿದರೆ ಸಾಲದು, ಅದನ್ನು ನಂಬಬೇಕು. ನಂಬಿದರೆ ಸಾಲದು, ಅದಕ್ಕಾಗಿ ಕೆಲಸ ಮಾಡಬೇಕು.

—ಎಲಿನಾರ್ ರೂಸ್‌ವೆಲ್ಟ್

★ ಕನ್ನಡಿಯೊಂದು ನಿಮ್ಮನ್ನು ದುಃಖಿತರನ್ನಾಗಿ ಮಾಡದಿದ್ದರೆ, ಆ ಕನ್ನಡಿಗೆ ನೀವು ಗೊತ್ತಿಲ್ಲ ಎಂದೇ ಅರ್ಥ.

—ಸಂತ ಕಬೀರ

★ ಸಣ್ಣ ಪುಟ್ಟ ಕೆಲಸಗಳಲ್ಲೂ ನಿಮ್ಮ ಹೃದಯ, ಮನಸ್ಸು ಮತ್ತು ಆತ್ಮವನ್ನು ತೊಡಗಿಸಿಕೊಳ್ಳಿ. ಅದೇ ಯಶಸ್ಸಿನ ದಾರಿ.

—ಸ್ವಾಮಿ ಶಿವಾನಂದ